OS 119/2018

ಡಿಡಬ್ಲ್ಯೂ1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ದಿಃ 26-06-2025

ಪಾಟೀ ಸವಾಲು : ವಾದಿ ಪರಃ ಶ್ರೀ ಆರ್. ಎಮ್. ವಕೀಲರಿಂದಃ

ನಾನು ಕಾರ್ಕಳ ಪುರಸಭೆಯ ಕೌನ್ಸಿಲರ್ ಆಗಿ 5 ವರ್ಷಗಳ ಕಾಲ ಸೇವೆ ಸಲ್ಲಿಸಿರುತ್ತೇನೆ. ನಾನು ಬಿ.ಜೆ.ಪಿ ಪಕ್ಷದ ಸಕ್ರಿಯಕಾರ್ಯಕರ್ತಳೂ ಆಗಿರುತ್ತೇನೆ. ನಾನು ಪುರಸಭೆಯ ಕೌನ್ಸಿಲರ್ ಆಗಿದ್ದ ಕಾರಣ ಜನರ ಕಷ್ಟಗಳಿಗೆ, ಅವರ ಕೆಲಸ ಕಾರ್ಯಗಳನ್ನು ಮಾಡಿಕೊಡುತ್ತಿದ್ದೆ ಎಂದರೆ ನನ್ನ ಅವಧಿಯಲ್ಲಿ ಮಾಡಿಕೊಡುತ್ತಿದ್ದೆ. ನಾನು ಒಬ್ಬ ರಾಜಕಾರಣಿ ಹಾಗೂ ಮಾಜಿ ಸದಸ್ಯೆ ಆಗಿರುವ ಕಾರಣ ಜನರ ಸಮಸ್ಯೆಗಳಿಗೆ ಯಾವ ರೀತಿ ಸ್ಪಂದಿಸಬೇಕು ಹಾಗೂ ಅಧಿಕಾರಿಗಳಿಂದ ಕೆಲಸ ಪಡೆಯಬೇಕು ಎಂದು ಗೊತ್ತಿರುತ್ತದೆ. ವ್ಯಾಜ್ಯದ ಆಸ್ತಿಯಲ್ಲಿರುವ ಕಟ್ಟಡಕ್ಕೆ ಪೂರ್ವದಲ್ಲಿ ನನ್ನ ಕೆನೆಟಿಕ್ ಶೋರೂಮ್ ಮತ್ತು ವರ್ಕ್ ಶಾಪ್ ಕಾರ್ಕಳದ ದಾನಶಾಲೆಯಲ್ಲಿ ಇತ್ತು. ಅಲ್ಲಿ ಸುಮಾರು 5 ವರ್ಷಗಳ ಇತ್ತು. ನನ್ನ ದಾನಶಾಲೆಯಲ್ಲಿ ವರ್ಕ್ ಶಾಪ್ ಮತ್ತು ಶೋರೂಮ್ ಅಲ್ಲದೆ ವಾಟರ್ ಸರ್ವಿಸ್ ಇತ್ತು. ಅಲ್ಲಿ ವಾಟರ್ ಸರ್ವಿಸ್ ಮಾಡಲು ಅನುಮತಿ ಇತ್ತು ಎಂದು ತೋರಿಸಲು ಪರವಾನಿಗೆಯನ್ನು ಹಾಜರುಪಡಿಸಬಹುದು. ದಾನಶಾಲೆಯ ನಂತರ ಕಾರ್ಕಳ ಮೊಟಾರ್ಸ್ ರವರ ಪಕ್ಕದ ಬಿಲ್ಡಿಂಗ್ ನಲ್ಲಿ ನಮ್ಮ ಶೋರೂಮ್ ನ್ನು 3 ವರ್ಷಗಳ ಕಾಲ ನಡೆಸಿರುತ್ತೇವೆ. ಆ ಸಂದರ್ಭದಲ್ಲಿ ಕಾರ್ಕಳ ಮೊಟರ್ಸ್ ರವರ ಕಟ್ಟಡದಲ್ಲಿ ವಾಟರ್ ಸರ್ವಿಸ್ ಮಾಡುತ್ತಿದ್ದೆ. ಕಾರ್ಕಳ ಮೊಟರ್ಸ್ ರವರು ಮಾರುತಿ ಸುಜುಕಿಯ ಅಧಿಕೃತ ಸರ್ವಿಸ್ ಮಾಡುವವರು. ಕಾರ್ಕಳ ಮೊಟರ್ಸ್ ಸರ್ವಿಸ್ ಸಂಟರ್ ಗೆ ಮಾಲಿನ್ಯ ನಿಯಂತ್ರಣ ಮಂಡಳಿ, ಪುರಸಭೆ, ಜಿಲ್ಲಾ ಕಾರ್ಖಾನೆಯವರಿಂದ ಪರವಾನಿಗೆ ಇದೆ. ಕಾರ್ಮಿಕ ಇಲಾಖೆಯವರಿಂದ ಅನುಮತಿ ಇತ್ತು ಎಂದರೆ ಗೊತ್ತಿಲ್ಲ. ಆ

ನಂತರ ನಾವು ಭುವನೇಂದ್ರ ಕಾಲೇಜು ರಸ್ತೆಯಲ್ಲಿರುವ ಕ್ರೈಸ್ಟ್ ಕಾಂಪ್ಲೆಕ್ಸ್ ಗೆ ಬಂದಿರುತ್ತೇವೆ. ನಾವು ಕಟ್ಟಡಕ್ಕೆ ಬಾಡಿಗೆಗೆ ಬಂದ ನಂತರ ಉಳಿದ ನಿರ್ಮಾಣ ಮಾಡಿಕೊಂಡಿರುತ್ತೇವೆ. ನಾವು ಅಲ್ಲಿ ಬಾಡಿಗೆ ಆಧಾರದಲ್ಲಿ ಇದ್ದೇವೆ. ಬಾಡಿಗೆ ಕರಾರು ನೋಡಿದರೆ ಸಂಪೂರ್ಣ ಮಾಹಿತಿ ಗೊತ್ತಾಗುತ್ತದೆ ಎಂದರೆ ಸರಿ. ಬಾಡಿಗೆ ಕರಾರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಕ್ರೈಸ್ಟ್ ಕಾಂಪ್ಲೆಕ್ ಗೆ ದಿಃ 04-09-2012 ರಲ್ಲಿ ಬಂದಿರುತ್ತೇವೆ. 1 ನೇ ಪ್ರತಿವಾದಿ ಕ್ರೈಸ್ಟ್ ಕಾಂಪ್ಲೆಕ್ಸ್ ಕಟ್ಟಡಕ್ಕೆ ಯಾವಾಗ ಅನುಮತಿ ಪಡೆದುಕೊಂಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಕಟ್ಟಡ ಕಟ್ಟಲು ಯಾವಾಗ ಪ್ರಸ್ತಾವನೆ ಸಲ್ಲಿಸಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಸದ್ರಿ ಕಟ್ಟಡವನ್ನು ಯಾವಾಗ ಕಟ್ಟಿರುತ್ತಾರೆ, ಯಾರಿಂದ ಜಾಗವನ್ನು ಎಷ್ಟು ಮೊತ್ತಕ್ಕೆ ಖರೀದಿ ಮಾಡಿರುತ್ತಾರೆ , ಅದರ ವಿಸ್ತೀರ್ಣ ಇತ್ಯಾದಿಗಳ ಬಗ್ಗೆ 1 ಮತ್ತು 2 ನೇ ಪ್ರತಿವಾದಿಗಳಿಗೆ ಗೊತ್ತಿರುತ್ತದೆ. ಕಟ್ಟಡದ ಅನುಮತಿ ಯಾವಾಗ ಪಡೆದುಕೊಂಡಿರುತ್ತಾರೆ, ಅದರ ಅಂದಾಜು ಪಟ್ಟಿ ವಿನ್ಯಾಸ ಇತ್ಯಾದಿಗಳು ಕೂಡಾ ಅವರಿಗೆ ಗೊತ್ತಿರುತ್ತದೆ. ದಿಃ 21-07-2014 ರಂದು ಕಟ್ಟಡ ಕಟ್ಟಲು ಒಂದನೇ ಪ್ರತಿವಾದಿಯವರಿಗೆ ಅನುಮತಿ ಸಿಕ್ಕಿರುತ್ತದೆ ಎಂದರೆ ಗೊತ್ತಿಲ್ಲ. ನನಗೆ ನಾವು ಬಾಡಿಗೆ ತೆಗೆದುಕೊಂಡ ಕಟ್ಟಡ ಮತ್ತು ಅದರ ವ್ಯಾಪಾರದ ಬಗ್ಗೆ ಮಾತ್ರ ಗೊತ್ತಿದ್ದು ಅದರ ಬಗ್ಗೆ ಸಾಕ್ಷ್ಯ ನೀಡಲು ಬಂದಿರುತ್ತೇನೆ. ಕ್ರೈಸ್ಟ್ ಕಾಂಪ್ಲೆಕ್ ನ ಪಶ್ಚಿಮ ಬದಿಯಲ್ಲಿ ಭುವನೇಂದ್ರ ಕಾಲೇಜು ರಸ್ತೆ ಹಾದುಹೋಗುತ್ತದೆ ಎಂದರೆ ಸರಿ. ರಸ್ತೆಯ ಒಂದು ಬದಿಯಲ್ಲಿ ಐ.ಬಿ. ಇದೆ. ಭುವನೇಂದ್ರ ಕಾಲೇಜಿಗೆ ಹೋಗುವ ರಸ್ತೆ ಕಾರ್ಕಳ ಸ್ವರಾಜ್ ಮೈದಾನದಿಂದ ಭುವನೇಂದ್ರ ಕಾಲೇಜು ಕಡೆಗೆ ಇಳಿಜಾರಾಗಿರುತ್ತದೆ ಎಂದರೆ ಗೊತ್ತಿಲ್ಲ. ಆ ರಸ್ತೆ ಬದಿಯಲ್ಲಿಯೇ ನಮ್ಮ ಶೋರೂಮ್ ಇದೆ. ಕ್ರೈಸ್ಟ್ ಕಾಂಪ್ಲೆಕ್ ನ ಜಾಗಕ್ಕೆ ತಾಗಿ ಒಂದು ಸರ್ಕಾರಿ ಪರಂಬೋಕು ಜಾಗ ಇದೆ ಎಂದರೆ ಸರಿ. ಪರಂಬೋಕು ತೋಡಿನಲ್ಲಿ ಮಳೆಯ ನೀರು ಹಾದು ಹೋಗುತ್ತದೆ ಎಂದರೆ ಸರಿ. ಸ್ವರಾಜ್ ಮೈದಾನದಿಂದ ಕೆಳಮುಖವಾಗಿ ಮಳೆ ನೀರು ಹರಿದು ಹೋಗುತ್ತದೆ ಎಂದರೆ ಸರಿ. ಮಳೆ ನೀರುಗಳು ಸ್ವಾಭಾವಿಕವಾಗಿ ಎತ್ತರದಿಂದ ಇಳಿಜಾರು ಪ್ರದೇಶಕ್ಕೆ ಹೋಗುತ್ತದೆ ಎಂದರೆ ಸರಿ. ಈಗ ನನಗೆ ತೋರಿಸಿದ ಭಾವಚಿತ್ರದಲ್ಲಿ ಕಾಣುವ ಕಟ್ಟಡ ನನ್ನ ಶೋರೂಮ್ ಇರುವ ಕಟ್ಟಡವಾಗಿರುತ್ತದೆ ಮತ್ತು ಇನ್ನೊಂದು ಭಾವಚಿತ್ರದಲ್ಲಿ ಕಾಣುವ ಕಟ್ಟಡ ಐ.ಬಿ ಆಗಿರುತ್ತದೆ. ಅವುಗಳನ್ನು ಸಾಕ್ಷಿ ನೋಡಿ ಒಪ್ಪಿದ ಮೇರೆಗೆ ನಿಪಿ-34 ಹಾಗೂ ನಿಪಿ-35 ಎಂದು ಗುರುತಿಸಲಾಯಿತು.

ನನ್ನ ಶೋರೂಮ್ ನಿಂದ ವಾದಿಯವರ ಮನೆ ಕಣ್ಣಿಗೆ ಕಾಣಿಸುತ್ತದೆ ಎಂದರೆ ಸರಿ. ವಾದಿಯವರ ಮನೆಯ ಹಿಂದುಗಡೆ ಅಂದರೆ ನಮ್ಮ ಶೋರೂಮ್ ನ ಉತ್ತರಕ್ಕೆ ಅವರ ಜಾಗದ ದಕ್ಷಿಣಕ್ಕೆ ಕುಡಿಯುವ ನೀರಿನ ಬಾವಿ ಇದೆ ಎಂದರೆ ಸರಿ. ವಾದಿಯವರ ಮನೆಯ ಉತ್ತರ ಮತ್ತು ಪಶ್ಚಿಮದಲ್ಲಿ ದೊಡ್ಡ ಬಂಡೆ ಇದೆ ಎಂದರೆ ಗೊತ್ತಿಲ್ಲ. ಸದ್ರಿ ಬಂಡೆ ನಮ್ಮ ಶೋರೂಮ್ ಅಡಿಯಲ್ಲಿಯೂ ಇದೆ ಎಂದರೆ ಗೊತ್ತಿಲ್ಲ. ಕ್ರೈಸ್ಟ್ ಕಾಂಪ್ಲೆಕ್ ನ ಬದಿಯಲ್ಲಿ ಮಳೆ ನೀರು ಹಾದುಹೋಗುತ್ತದೆ ಎಂದರೆ ಸರಿಯಲ್ಲ. ವಾದಿಯವರ ಬಾವಿ ಹೆಚ್ಚು ಆಳ ಇದೆಯಾ ಎಂದರೆ ಗೊತ್ತಿಲ್ಲ. ಬಾವಿಯ ಅಡಿಯಲ್ಲಿ ಪಾದೆ ಇದೆ ಎಂದು ಗೊತ್ತಿಲ್ಲ. ಸದ್ರಿ ಕಟ್ಟಡದ ಬದಿಯಲ್ಲಿ ಹರಿಯುವ ಮಳೆ ನೀರುಗಳು ಇಂಗಿ ಹೋಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಶೋರೂಮ್ ನ ಒಳಗೆ ಮಾತ್ರ ಬಂದು ಹೋಗುತ್ತೇನೆ. ಪುರಸಭೆಗೆ ಆಕ್ಷೇಪ ಸಲ್ಲಿಸಿರುವ ಸಮಯದಲ್ಲಿ ಒಮ್ಮೆ ಸರ್ಕಾರಿ ಪರಂಬೋಕು ಜಾಗದಲ್ಲಿ ಒಂದು ಟ್ಯಾಂಕ್ ಇಟ್ಟಿದ್ದೀರಾ ಎಂದರೆ ಅಲ್ಲಿ ಅಗೆಯಲು ಆಗಿರುವುದಿಲ್ಲ ಎಂದರೆ ಸಾಕ್ಷಿಯು ಅಗೆಯಲು ತಗ್ಗು ಪ್ರದೇಶ ಆಗಿರುತ್ತದೆ ಎಂದು ನುಡಿಯತ್ತಾರೆ. ವಾದಿಗೆ ನಮ್ಮ ಶೋರೂಮ್ ನಲ್ಲಿ ಕೇವಲ ವಾಟರ್ ಸರ್ವಿಸ್ ಮಾಡಲು ಮ್ಮಾತ್ತ ಆಕ್ಷೇಪವಿರುತ್ತದೆ ಎಂದರೆ ಸರಿ. ಭುವನೇಂದ್ರ ಕಾಲೇಜು ರಸ್ತೆಯಲ್ಲಿ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ. ಒಳಚರಂಡಿ ವ್ಯವಸ್ಥೆ ಇಲ್ಲದ ಪ್ರದೇಶಗಳಲ್ಲಿ ಮಾಲೀಕರೇ ಆ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದರೆ ಸಾಕ್ಷಿ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ವಾಹನ ತೊಳೆದ ನೀರು ಹೋಗಲು ಯಾವ ವ್ಯವಸ್ಥೆ ಇದೆ ಎಂದು ತೋರಿಸಲು ದಾಖಲೆ ಇದೆ. ಸ್ನಾನ ಮಾಡಿದ ನೀರು, ಬಟ್ಟೆತೊಳೆದ ನೀರು, ವಾಹನ ತೊಳೆದ ನೀರು ಹೋಗಲು ವಾಟರ್ ಟ್ರೀಟ್ ಮೆಂಟ್ ಪ್ಲಾಂಟ್ ಇದೆಯಾ ಎಂದರೆ ಆ ಬಗ್ಗೆ ಗೊತ್ತಿಲ್ಲ. ಒಂದು ಶೋರೂಮ್ ನಡೆಸಲು ವಾಟರ್ ಟ್ರೀಟ್ ಮೆಂಟ್ ಪ್ಲಾಂಟ್ ಮಾಡುವುದು ಕಡ್ಡಾಯ ಎಂದರೆ ಗೊತ್ತಿಲ್ಲ. ಸುಜುಕಿ ದ್ವಿಚಕ್ರ ವಾಹನ ಕ್ಕೆ ಪೆಟ್ರೋಲ್, ಗ್ರೀಸ್‌ದ ಇಂಜಿನ್ ಆಯಿಲ್ ನ ಅವಶ್ಯಕತೆ ಇದೆ ಎಂದರೆ ಸರಿ. ಅವುಗಳನ್ನು ಕ್ಲೀನ್ ಮಾಡಲು ಇರುವುದು ವಾಟರ್ ಸರ್ವಿಸ್ ಎಂದರೆ ಸರಿ. ಒಂದು ಸರ್ವಿಸ್ ಸ್ಟೇಷನ್ ಮಾಡಲು ಎಲ್ಲಾ ವ್ಯವಸ್ಥೆಗಳು ಇದ್ದರೆ ಮಾತ್ರ ಆಗುತ್ತದೆ ಎಂದರೆ ಸರಿ. ವಾಟರ್ ಟ್ರೀಟ್ ಮೆಂಟ್ ಪ್ಲಾಂಟ್ ವ್ಯವಸ್ಥೆ ಇಲ್ಲದಿದ್ದರೆ ಅದನ್ನು ಒಂದು ಕಡೆ ಸಂಗ್ರಹಿಸಿ ಪುರಸಭೆ ವಾಹನದ ಮೂಲಕ ಸಾಗಿಸಬೇಕು ಎಂದರೆ ಸರಿ. ದಿಃ 10-05-2019 ಕ್ಕೆ ಅನ್ವಯವಾಗುವ ಒಂದು ರಶೀದಿ ಮಾತ್ರ ವೇಸ್ಟ್ ನೀರು ಸಾಗಿಸಿದ ಬಗ್ಗೆ ಇರುವ ದಾಖಲೆ ಎಂದರೆ ಉಳಿದ ದಾಖಲೆಗಳನ್ನು ವಕೀಲರಿಗೆ ಕೊಟ್ಟಿರುತ್ತೇನೆ. 2012 ರಿಂದ

2019 ಮತ್ತು ಇಲ್ಲಿಯವರೆಗಿನ ಕಲುಷಿತ ನೀರು ಸಾಗಿಸಿದ ಬಗ್ಗೆ ದಾಖಲೆ ಇದೆ ಅದನ್ನು ಹಾಜರುಪಡಿಸಬಹುದು. ತಹಶೀಲ್ದಾರರವರ ಎಮ್.ಎ. ಜಿ.ಸಿ.ಆರ್ 136/18-19 ಪ್ರಕರಣದಲ್ಲಿ ನನ್ನ ಶೋರೂಮ್ ನ ಕಲುಷಿತ ನೀರನ್ನು ಭಾಗೀರತಿ ಪ್ರಭುರವರ ಪಟ್ಟಾ ಜಾಗದಲ್ಲಿ ಶೇಖರಿಸಿ ಇಟ್ಟಿರುತ್ತೇನೆ ಎಂದು ಹೇಳಿಕೆ ನೀಡಿರುತ್ತೇನೆ. ಒಂದು ವೇಳೆ ಕಲುಷಿತ ನೀರನ್ನು ಶೇಖರಣೆ ಮಾಡಲು ಒಂದು ಮತ್ತು 2 ನೇ ಪ್ರತಿವಾದಿಯವರ ಜಾಗದಲ್ಲಿ ಸ್ಥಳ ಇದ್ದಿದ್ದರೆ ನಾನು ಭಾಗೀರತಿ ಪ್ರಭುರವರ ಒಪ್ಪಿಗೆ ಪಡೆದು ಅವರ ಸ್ಥಳದಲ್ಲಿ ಕಲುಷಿತ ನೀರು ಸಂಗ್ರಹಿಸುತ್ತಿರಲಿಲ್ಲ ಎಂದರೆ ಸಾಕ್ಷಿಯು 1 ಮತ್ತು 2 ನೇ ಪ್ರತಿವಾದಿಗಳು ವಿದೇಶದಲ್ಲಿದ್ದರೂ ಅವರ ಅನುಮತಿ ಇಲ್ಲದೆ ಅವರ ಜಾಗದಲ್ಲಿ ನಾವು ವ್ಯವಸ್ಥೆ ಮಾಡಲಾಗುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿ ತಿಂಗಳು ಅವರಿಗೆ ಸರಿಯಾದ ಸಮಯದಲ್ಲಿ ಬಾಡಿಗೆ ನೀಡುತ್ತಿದ್ದೇವೆ. ಕ್ರೈಸ್ಟ್ ಕಾಂಪ್ಲೆಕ್ ನ ಮೊದಲ ಮಹಡಿಯಲ್ಲಿ ವಾಸದ ಮನೆ ಇದ್ದು ಅಲ್ಲಿ 1 ಮತ್ತು 2 ನೇ ಪ್ರತಿವಾದಿಯವರು ವಾಸ ಇದ್ದಾರೆ ಎಂದರೆ ಸರಿ. ಅವರ ಮೂಲ ಸ್ಥಳ ರಾಮಸಮುದ್ರ ಬಳಿ ಇರುವ ಮಂಗಳಪಾದೆಯಾಗಿರುತ್ತದೆ. 1 ಮತ್ತು 2 ನೇ ಪ್ರತಿವಾದಿ ವಿದೇಶದಲ್ಲಿ ಇದ್ದ ಸಮಯದಲ್ಲಿ ಅವರ ಅಧಿಕಾರಧಾರಕರಾದ ಆಂಟೋನಿ ಪೌಲ್ ಡಿಸೋಜಾ ನೋಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಬಾಡಿಗೆಯನ್ನು ಅವರು ವಿದೇಶದಲ್ಲಿ ಇದ್ದಾಗ ಬ್ಯಾಂಕಿಗೆ ಹಾಕುತ್ತಿದ್ದೆವು. ಆ ಬಗ್ಗೆ ದಾಖಲೆ ಇದೆ. ವಾದಿಯವರು ಪುರಸಭೆಗೆ ಪರವಾನಿಗೆ ಕೊಟ್ಟ ಬಗ್ಗೆ ಆಕ್ಷೇಪ ಕೊಟ್ಟಿರುತ್ತಾರೆ ಎಂದರೆ ಸರಿ. ಅವರ ಆಕ್ಷೇಪ ನಮ್ಮ ಶೋರೂಮ್ ನಲ್ಲಿ ವಾಹನ ತೊಳೆಯುವುದರಿಂದ ಕಲುಷಿತ ನೀರು ಅವರ ಬಾವಿಗೆ ಹೋಗುತ್ತದೆ ಅದರಿಂದ ಬಾವಿ ನೀರು ಕಲುಷಿತವಾಗಿದ್ದು ಅದನ್ನು ಬಳಸಲು ಆಗುತ್ತಿಲ್ಲ ಎಂಬುದಾಗಿರುತ್ತದೆ. ಅವರ ಆಕ್ಷೇಪ ಇದ್ದಾಗಲೂ ಪುರಸಭೆಯವರು ಅನುಮತಿ ಕೊಟ್ಟಿರುತ್ತಾರೆ ಎಂದರೆ ಸರಿ. ಮುಂದುವರಿದು ಆ ಬಗ್ಗೆ ವ್ಯವಸ್ಥೆ ಮಾಡಿಕೊಂಡಿರುತ್ತೇವೆ. ಸದ್ರಿ ಅನುಮತಿಯ ಬಗ್ಗೆ ಎ.ಸಿ. ಅವರ ಮುಂದೆ ಪ್ರಶ್ನಿಸಿರುತ್ತಾರೆ ಎಂದರೆ ಸರಿ. ಎ.ಸಿ. ಯವರು ತಾತ್ಕಾಲಿಕವಾಗಿ ಶೋರೂಮ್ ಬಂದ್ ಮಾಡುವಂತೆ ಆದೇಶ ನೀಡಿರುತ್ತಾರೆ ಎಂದರೆ ಸರಿ. ಎರಡು ದಿನಗಳ ನಂತರ ಸದ್ರಿ ಆದೇಶವನ್ನು ತೆರವು ಮಾಡಿರುತ್ತಾರೆ. ರಾಜಕೀಯ ಪ್ರಭಾವ ಬೀರಿ ನಮಗೆ ಬೇಕಾದಂತೆ ಆದೇಶ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾಖಲೆಯನ್ನು ನೋಡಿ ಮಾಡಿರುತ್ತಾರೆ. ಎ.ಸಿ. ಯವರ ನ್ಯಾಯಾಲಯದಲ್ಲಿ ತನಿಖೆ ನಡೆಯುತ್ತಿದ್ದಾಗ ಕಾರ್ಕಳ

ಆರೋಗ್ಯ ಇಲಾಖೆಯಿಂದ ವಾದಿ ಬಾವಿಯ ನೀರನ್ನು ಪರಿಶೀಲನೆ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ವಾದಿ ಬಾವಿಯ ನೀರನ್ನೇ ಸಂಗ್ರಹಿಸಿರುವ ಬಗ್ಗೆ ಮಾಹಿತಿ ಇಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶಕೋರಿದ್ದು ಸಮಯಾವಕಾಶ ನೀಡಿ ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ